ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.02/2025 ದಿನಾಂಕ: 05-08-2025

**ಆಯುಷ್ ಸೀಟುಗಳ ಹಂಚಿಕೆ ಕುರಿತು ಟಿಪ್ಪಣಿ**

2025ನೇ ಸಾಲಿನ ಯುಜಿ ಆಯುಷ್ ಕೋರ್ಸುಗಳಾದ ಆಯುರ್ವೇದ ಮತ್ತು ಯುನಾನಿ ಕೋರ್ಸುಗಳಿಗೆ ಸರ್ಕಾರದಿಂದ ಸೀಟ್ ಮ್ಯಾಟ್ರಿಕ್ಸ್ ಸ್ವೀಕರಿಸಿದ ನಂತರ ಯುಜಿನೀಟ್ 2025 ರಲ್ಲಿ ಅರ್ಹತೆ ಪಡೆದಿರುವ ಮತ್ತು ಪ್ರಾಧಿಕಾರದಲ್ಲಿ ನೋಂದಣಿ ಮಾಡಿ ವೆರಿಫಿಕೇಶನ್ ಸ್ಲಿಪ್ ಹೊಂದಿರುವ ಅಭ್ಯರ್ಥಿಗಳಿಗೆ ಇಚ್ಛೆ / ಆಯ್ಕೆಗಳನ್ನು ದಾಖಲಿಸಲು ಅವಕಾಶ ನೀಡಲಾಗುವುದು.

ಯುಜಿಸಿಇಟಿ / ಯುಜಿನೀಟ್ ಸೀಟುಗಳ ಫಲಿತಾಂಶ ಪ್ರಕಟಣೆಯ ನಂತರ ಛಾಯ್ಸ್‌ಗಳನ್ನು ಆಯ್ಕೆ ಮಾಡುವ ಕುರಿತು ವಿವರಣೆಗಳನ್ನು ನೀಡಿದೆ. ಈಗಾಗಲೆ ಹಂಚಿಕೆಯಾಗಿರುವ ಸೀಟು ಇಷ್ಟವಿದೆ ಆದರೆ ಇನ್ನೂ ಉತ್ತಮ ಸೀಟನ್ನು ಪಡೆಯಲು ಆಸಕ್ತಿ ಇರುವ ಅಭ್ಯರ್ಥಿಗಳು ಛಾಯ್ಸ್-2 ಅನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ಮುಂದಿನ ಸುತ್ತಿನಲ್ಲಿ ಭಾಗವಹಿಸಲು ಅವಕಾಶ ಇದೆ ಸ್ಪಷ್ಟಪಡಿಸಲಾಗಿದೆ.

ಒಂದು ವೇಳೆ ಹಂಚಿಕೆಯಾಗಿರುವ ಸೀಟು ಇಷ್ಟವಿಲ್ಲ ಆದರೆ ಉಳಿದ ಇಚ್ಛೆ / ಆಯ್ಕೆಗಳೊಂದಿಗೆ ಮುಂದಿನ ಸುತ್ತಿನಲ್ಲಿ ಭಾಗವಹಿಸಲು ಛಾಯ್ಸ್-3 ಎಂದು ಆಯ್ಕೆ ಮಾಡಿಕೊಳ್ಳಲೂ ಸಹ ಅವಕಾಶ ಇದೆ ಎಂದು ಅಭ್ಯರ್ಥಿಗಳಿಗೆ ಸೂಚಿಸಿರುವದನ್ನು ಛಾಯ್ಸ್ ಗಳ ಟಿಪ್ಪಣಿಯಲ್ಲಿ ನೀಡಲಾಗಿದೆ.

ಮುಂದುವರಿದು ಯುಜಿ ಸಿಇಟಿ ಅಥವಾ ಯುಜಿನೀಟ್ ಕೋರ್ಸುಗಳಲ್ಲಿ ಹಂಚಿಕೆಯಾಗಿರುವ ಸೀಟು ಇಷ್ಟವಿದೆ ಆದರೆ ಆಯುರ್ವೇದ ಮತ್ತು ಯುನಾನಿ ಸೀಟುಗಳ ಆಕಾಂಕ್ಷಿಗಳಾಗಿದ್ದಲ್ಲಿ ಅಂತಹ ಅಭ್ಯರ್ಥಿಗಳು ಹಂಚಿಕೆಯಾದ ಸೀಟಿಗೆ ಛಾಯ್ಸ್-2 ಅನ್ನು ಆಯ್ಕೆ ಮಾಡಿ ಮುಂದಿನ ಸುತ್ತಿನ ಸೀಟು ಹಂಚಿಕೆಯವರೆಗೆ ಕಾಯಬಹುದಾಗಿದೆ ಎಂದು ಈ ಮೂಲಕ ಮತ್ತೊಮ್ಮೆ ಸ್ಪಷ್ಟಪಡಿಸಲಾಗಿದೆ.

ಒಂದು ವೇಳೆ ಛಾಯ್ಸ್-1 ಅನ್ನು ಆಯ್ಕೆ ಮಾಡಿಕೊಂಡಲ್ಲಿ ಮುಂದಿನ ಸುತ್ತುಗಳಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ ಎಂದು ಛಾಯ್ಸ್‌ಗಳ ಟಿಪ್ಪಣಿಯಲ್ಲಿ ನೀಡಿರುವುದನ್ನು ಅಭ್ಯರ್ಥಿಗಳು ಗಮನಿಸಬಹುದು.

ಮುಂದಿನ ಸುತ್ತಿನ ಸೀಟು ಹಂಚಿಕೆಗೆ ಆಯುರ್ವೇದ ಮತ್ತು ಯುನಾನಿ ಕೋರ್ಸುಗಳಿಗೆ ಇಚ್ಛೆ / ಆಯ್ಕೆಗಳನ್ನು ದಾಖಲಿಸಲು ವೇಳಾಪಟ್ಟಿಯ ಅನುಸಾರ ಅರ್ಹ ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಲಾಗುವುದು.

ಕಾರ್ಯನಿರ್ವಾಹಕ ನಿರ್ದೇಶಕರು

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583 Helpline : 080 - 23 460 460.
e-mail : keauthority-ka@nic.in Website : http://kea.kar.nic.in